Reg. No. | | | | | | | | | |

# BBAKAL 153/BBMKAL 153

**Credit Based II Semester B.B.A./B.B.M. Examination, April/May 2017**
**(New Scheme)**
**(Common to all Batches)**
**KANNADA**
**Kannada Language Paper – II**

Time : 3 Hours Max. Marks : 80

Shri Dharmasthala Manjunatheshwara
College of Business Management Library
MANGALORE - 575 003

## ಭಾಗ – 1

**(ಕಾವ್ಯ)** **(35 ಅಂಕಗಳು)**

I. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) 'ದುರ್ಯೋಧನ ವಿಲಾಪಂ' ಪದ್ಯಭಾಗದಲ್ಲಿ ದುರ್ಯೋಧನನ ಪಾತ್ರ ಹೇಗೆ ಚಿತ್ರಿತವಾಗಿದೆ? ವಿವರಿಸಿ.

2) ಸಮಾಜದ ಉಪೇಕ್ಷೆಗೆ ಗುರಿಯಾಗಿರುವ ಹೆಣ್ಣು ಮಗಳೊಬ್ಬಳು ಕಂಡುಕೊಳ್ಳುವ ದುರಂತವನ್ನು ವೈದೇಹಿಯವರು ಚಿತ್ರಿಸಿದ ಬಗೆ ಹೇಗೆ? ವಿವರಿಸಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿರಿ. **(1×5=5)**

1) ಆಯ್ದಕ್ಕಿ ಲಕ್ಕಮ್ಮನ ವಚನಗಳಲ್ಲಿ ಕಾಯಕದ ಮಹತ್ವ ಹೇಗೆ ವ್ಯಕ್ತವಾಗಿದೆ?

2) ನಾಗವ್ವನ ಬದುಕಿನ ದುರಂತ ಜನಪದ ಪದ್ಯಭಾಗದಲ್ಲಿ ಹೇಗೆ ವ್ಯಕ್ತವಾಗಿದೆ?

ಇ) ಕೆಳಗಿನವುಗಳಲ್ಲಿ **ಎರಡು** ಪದಗಳಿಗೆ ಟಿಪ್ಪಣಿ ಬರೆಯಿರಿ : **(2×3=6)**

1) ವೈದೇಹಿ

2) ದುಶ್ಶಾಸನ

3) ಮರುಳುಗಳ ಪ್ರಸಂಗ.

P.T.O.

II. ಅ) **ಒಂದು** ಪದ್ಯದ ಸಂದರ್ಭ ಸೂಚಿಸಿ ಮಹತ್ವವನ್ನು ವಿವರಿಸಿರಿ. (1×5=5)

1) ಗಳಿತಶರಮಾಯ್ತು ಹಸ್ತಂ
ಗಳಿತರಣೋತ್ಸಾಹಮಾಯ್ತು ಹೃದಯಂ ನಯನಂ
ಗಳಿತಾಶ್ರುವಾಯ್ತು ಕೌರವ
ಕುಳತಿಲಕಂಗಾ ಕುಮಾರನಂ ಕಾಣಲೊಡಂ

2) ಮೂಗಿಲ್ಲದಂಗೆ ಕನ್ನಡಿಯ ತೋರಲೇಕೆ ?
ಕೈಯಿಲ್ಲದವಂಗೆ ಕುದುರೆಯೇರಲೇಕೆ ?
ಕಾಲಿಲ್ಲದವಂಗೆ ನಿಚ್ಚಣಿಕೆಯನೇರಲೇಕೆ ?
ಭಕ್ತಿ ಜ್ಞಾನ ವೈರಾಗ್ಯವಿಲ್ಲದವಂಗೆ ಇಷ್ಟಲಿಂಗವೇಕೆ
ಅಮುಗೇಶ್ವರಾ ।

ಆ) **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. (2×3=6)

1) ಭೀಮಗದೆಯಿಂ ಪಂಚತ್ವಮಂ ಪೊರ್ದಿದಯ್.

2) ಚಿಕ್ಕದು ನಮ್ಮ ಹೆಣ್ಣು ಸೀರೆ ಉಡಲರಿಯದು.

3) ಯಾವುದೋ ಮೋಡಿಯ ಮಾದಕ ನಿಶೆಯಲಿ ಎಲ್ಲವೂ ಇಂದ್ರಜಾಲ.

III. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು** ಪದ ಅಥವಾ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (5×1=5)

1) 'ಗಾಂಧಾರೀಜ' ಎಂದರೆ ಯಾರು ?

2) 'ಚೆನ್ನಮಲ್ಲಿಕಾರ್ಜುನ' ಎಂಬುದು ಯಾರ ವಚನಗಳ ಅಂಕಿತ ?

3) ದುರ್ಯೋಧನನ ಮಗನ ಹೆಸರೇನು ?

4) ಸುಬ್ರಾಯ ಚೊಕ್ಕಾಡಿಯವರು ಬರೆದ ಕವನದ ಹೆಸರೇನು ?

5) ಮರುಳುಗಳ ಪಡೆಯಿಂದ ದುರ್ಯೋಧನನನ್ನು ರಕ್ಷಿಸಿದವರು ಯಾರು ?

## ಭಾಗ – 2
## (ಗದ್ಯ)

(25 ಅಂಕಗಳು)

IV. ಅ) **ಒಂದು** ಪ್ರಶ್ನೆಗೆ ಉತ್ತರಿಸಿರಿ. (1×8=8)

1) ಮನುಷ್ಯನಲ್ಲಿನ 'ಕೊಳ್ಳುಬಾಕತನ' ಹಾಗೂ 'ಲಾಭಕೋರತನ' ಗಳನ್ನು ನೇಮಿಚಂದ್ರ ಅವರು ಹೇಗೆ ಪ್ರತಿಪಾದಿಸಿದ್ದಾರೆ ?

2) 'ಮುದ್ದು ಬೆಕ್ಕುಗಳ ಮೋಹಕಲೋಕ' ಎಂಬ ಪ್ರಬಂಧ ಬೆಕ್ಕುಗಳ ಜೀವನ ವಿಧಾನದ ಬಗ್ಗೆ ಹೇಗೆ ಅರಿವನ್ನು ಮೂಡಿಸುತ್ತದೆ ? ವಿವರಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿರಿ. (1×8=8)

1) 'ಜೇಡನ ಬಲೆ' ಎಂಬ ಪ್ರಬಂಧ ಮನುಷ್ಯನ ಹೊಸ ಜೀವನಕ್ಕೆ ಯಾವ ಸಂದೇಶವನ್ನು ನೀಡುತ್ತದೆ ? ವಿವರಿಸಿ.

2) 'ಆಫೀಸ್ ಬಾಯ್ ಆಗಿದ್ದವನೂ ಉದ್ಯೋಗದಾತನಾಗಬಹುದು'' ಎಂಬುದನ್ನು ಉದಯಕುಮಾರ್ ಹೇಗೆ ತೋರಿಸಿಕೊಟ್ಟಿದ್ದಾರೆ ?

V. **ಒಂದು** ಪ್ರಶ್ನೆಗೆ ಉತ್ತರಿಸಿರಿ. (1×5=5)

1) ಭಾರತದ ಗ್ರಾಮೀಣ ಪ್ರದೇಶಗಳಲ್ಲಿನ ಬಡತನದ ಚಿತ್ರಣ 'ಬಡತನ ಅಭಿವೃದ್ಧಿ ಮಾಧ್ಯಮ' ಪ್ರಬಂಧದಲ್ಲಿ ಹೇಗೆ ವ್ಯಕ್ತವಾಗಿದೆ ?

2) ಕಲ್ಪನಾ ಸರೋಜ್ ಅವರ ದುಡಿಮೆಯ ಹಿಂದಿನ ಪರಿಶ್ರಮವನ್ನು ಪರಿಚಯಿಸಿ.

VI. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದು** ಪದ ಅಥವಾ **ಒಂದು** ವಾಕ್ಯದಲ್ಲಿ ಉತ್ತರಿಸಿರಿ. (4×1=4)

1) 'ಎಚ್ಚೆಸ್ಕೆ' ಯವರ ಪೂರ್ತಿ ಹೆಸರೇನು ?

2) 'ಮುದ್ದು ಬೆಕ್ಕುಗಳ ಮೋಹಕ ಲೋಕ' ಪ್ರಬಂಧವನ್ನು ಬರೆದವರಾರು ?

3) ಕಮನಿ ಟ್ಯೂಬ್ ಕಂಪೆನಿಯನ್ನು ಸ್ಥಾಪಿಸಿದವರು ಯಾರು ?

4) ಎ.ಆರ್. ಮಣಿಕಾಂತ್ ಅವರ ಪ್ರಬಂಧದ ಹೆಸರೇನು ?

## ಭಾಗ – 3

**(ನಾಟಕ)** **(20 ಅಂಕಗಳು)**

VII. ಅ) ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಕೃಷ್ಣ ಹಾಗೂ ದುರ್ಯೋಧನರ ಸಂಭಾಷಣೆಯ ಸ್ವಾರಸ್ಯವೇನು ? ವಿವರಿಸಿ.

2) 'ವಿನಾಶದ ಗರ್ಭದಲ್ಲಿ ವಿನೂತನ ಸೃಷ್ಟಿಯ ಬೀಜ ಅಡಗಿದೆ' ಎಂಬುದನ್ನು 'ಶ್ಮಶಾನ ಕುರುಕ್ಷೇತ್ರಂ' ನಾಟಕ ಹೇಗೆ ಪ್ರತಿಬಿಂಬಿಸುತ್ತದೆ ?

ಆ) ಒಂದು ಪ್ರಶ್ನೆಗೆ ಉತ್ತರಿಸಿರಿ. **(1×6=6)**

1) ಧೃತರಾಷ್ಟ್ರ–ಗಾಂಧಾರಿಯರ ಅಳಲು ನಾಟಕದಲ್ಲಿ ಹೇಗೆ ಮೂಡಿಬಂದಿದೆ ?

2) ಮುದುಕಿ ಹಾಗೂ ಮಾತೆಯರ ಸಂಭಾಷಣೆಯ ಸ್ವಾರಸ್ಯವೇನು ? ವಿವರಿಸಿ.

VIII. ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿವರಿಸಿರಿ. **(2×2=4)**

1) ನಾನಲ್ತೆ ಪೆರ್ಬಡೆಯ ಬೀರರ್ಕಳಂ ತಿಂದ ಪೆಣದಿನಿ ?

2) ಹೆತ್ತು ಹೊಳೆಗಿತ್ತ ನಿನ್ನನ್ ಸತ್ತ ಸುಡುಗಾಡಿನೊಳ್ ಮತ್ತೆ ಮುದ್ದಿಪಂತಾಯ್ತೆ ?

3) ಕಡೆಗುಂ ಪೊಲಸಾದುದೀ ಭಾರತ ಸಂಗ್ರಾಮಂ.

IX. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ **ಒಂದೊಂದು** ಪದ ಅಥವಾ ವಾಕ್ಯದಲ್ಲಿ ಉತ್ತರಿಸಿರಿ. **(2×1=2)**

1) ದುರ್ಯೋಧನನ ಮಂತ್ರಿಯ ಹೆಸರೇನು ?

2) ಘಟೋತ್ಕಚನನ್ನು ಯಾರು ಕೊಂದರು ?

---